International Journal of Kannada Research
www.kannadajournal.com

**ISSN: 2454–5813**
IJKR 2023; 9(3): 84-88
© 2023 IJKR
www.kannadajournal.com
Received: 16-05-2023
Accepted: 20-06-2023

**ಧರ್ಮರಾಯ**
ಸಂಶೋಧನಾ ವಿದ್ಯಾರ್ಥಿ,
ರಾಜ್ಯಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ, ಕರ್ನಾಟಕ,
ಭಾರತ

**Corresponding Author:**
**ಧರ್ಮರಾಯ**
ಸಂಶೋಧನಾ ವಿದ್ಯಾರ್ಥಿ,
ರಾಜ್ಯಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ, ಕರ್ನಾಟಕ,
ಭಾರತ

# ದಕ್ಷಿಣ ಕನ್ನಡ ಜಿಲ್ಲೆಯ ನಲಿಕೆ ಸಮುದಾಯದ ಸಾಂಸ್ಕೃತಿಕ ಆಚರಣೆಗಳು

**ಧರ್ಮರಾಯ**

**ಸಾರಾಂಶ**
ತುಳುನಾಡಿನಂತಹ ಒಂದು ಸಣ್ಣ ಭೂ ಪ್ರದೇಶದಲ್ಲಿ ವಾಸಿಸುವ ಹಲವು ಜಾತಿ ಜನಾಂಗಗಳ ಪೈಕಿ ಒಂದಾಗಿರುವ 'ನಲಿಕೆ' ಯು ಒಂದು ಸಮುದಾಯ. ಇವರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ, ಮಂಗಳೂರು ಮತ್ತು ಬಟ್ವಾಳ ತಾಲ್ಲೂಕು, ಉಡುಪಿಯ ಕಾರ್ಕಳ, ಕುಂದಾಪುರ ಹಾಗೂ ಕೇರಳದ ಕಾಸರಗೋಡು ಭಾಗಗಳಲ್ಲಿ ಅಲ್ಲಲ್ಲಿ ಈ ಸಮುದಾಯದ ಜನರು ಕಂಡು ಬರುತ್ತಾರೆ. ದೈವಾರಾಧನೆಯೇ ಪ್ರಮುಖ ಆಚರಣೆಯಾಗಿ ಬೆಳೆದು ಬಂದಿರುವ ತುಳುನಾಡಿನಲ್ಲಿ ನಲಿಕೆಯವರಿಗೆ ತಮ್ಮದೇ ಆದ ಪ್ರಾಶಸ್ತ್ಯವಿದೆ. ಭೂತಾರಾಧನೆ ತುಳುನಾಡಿನ ಅತ್ಯಂತ ಪ್ರಾಚೀನ ಆರಾಧನಾಕಲೆ, ಈ ಕಲೆಗೆ ಸಂಬಂಧಿಸಿದಂತೆ ಊರಿನ ಗೌಡ, ಬುದ್ಧಿವಂತರಿಗೆ ಹಾಗೂ ಪೂಜಾರಿಗಳಿಗೆ ಇರುವಷ್ಟೇ ಪ್ರಾಮುಖ್ಯತೆ, ಗೌರವ ಕೋಲ (ನೇಮ) ಕಟ್ಟುವ 'ನಲಿಕೆ'ಯವರಿಗೂ ಇರುತ್ತದೆ. ದೈವಗಳ ಕೋಲ (ನೇಮ) ನಡೆಯುವ ಸಂದರ್ಭದಲ್ಲಿ ನಿರ್ದೇಶಿಸಲ್ಪಟ್ಟ ನಲಿಕೆಯವರು ವೇಷ ಹಾಕಿ ಕುಣಿಯುತ್ತಾರೆ. ದೈವಿಕವಾದ ಸಂದರ್ಭಗಳನ್ನು ಸೃಷ್ಟಿಸುತ್ತಾರೆ. ವೇಷ ಹಾಕಿದ ಮೇಲೆ ಯಾವ ದೈವದ ನೇಮ ಕಟ್ಟಲಾಗಿರುತ್ತದೆಯೋ ಆ ದೈವವು ವೇಷ ಹಾಕಿರುವ ನರ್ತಕನ ಮೇಲೆ ಆಹ್ವಾಹನೆಯಾಗುತ್ತದೆ ಎಂಬುದು ತುಳುನಾಡಿನ ಜನರ ನಂಬಿಕೆಯಾಗಿದೆ. ನಲಿಕೆ ಸಮುದಾಯದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು. 1. ಜೀವನಾವರ್ತನ ಆಚರಣೆಗಳು 2. ಹಬ್ಬಗಳು 3. ಕುಣಿತಗಳು. ಪ್ರಸ್ತುತ ಜೀವನಾವರ್ತನ ಆಚರಣೆಗಳ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ಮುಖ್ಯಪದಗಳು:** ನಲಿಕೆ, ಭೂತಾರಾಧನೆ, ಕೋಲ(ನೇಮ), ಕುಣಿತ, ತುಳುನಾಡು, ತುಳು, ಪಾಡ್ದನ

**ಪೀಠಿಕೆ**
ನಲಿಕೆ, ಪರವ, ಪಂಬದ, ಮೇರ, ಮನ್ಸ ಸಮುದಾಯಗಳು ತುಳುನಾಡಿನ ಮೂಲನಿವಾಸಿಗಳೆಂದು ಪರಿಗಣಿಸಬಹುದು. ಈ ಸಮುದಾಯಗಳ ಜೀವನಕ್ರಮ, ವಾಸದ ಮನೆಗಳು, ನೆಲದ ಜೊತೆ ಅವರು ಸ್ಥಾಪಿಸಿಕೊಂಡಿರುವ ಪ್ರಾಕೃತಿಕ ಸಂಬಂಧ, ಸಾಂಸ್ಕೃತಿಕ ಆಚರಣೆಗಳಲ್ಲಿ ಅವರು ವಹಿಸುವ ಪಾತ್ರ, ಮೇಲ್ವರ್ಗದ ಆಶ್ರಯದಲ್ಲಿ ಆಳುಗಳಾಗಿ ದುಡಿಯುತ್ತಾ ಬಂದ ಶ್ರಮದ ಚಾರಿತ್ರಿಕ ಸ್ವರೂಪ, ಕುಣಿತಗಳು ಮತ್ತು ಭೂತರಾಧನೆಗಳ ಮೂಲಕ ಅವರು ನಿರ್ವಹಿಸುತ್ತಾ ಬಂದ ಕೆಲಸಗಳ ರೀತಿ ಈ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ನೋಡಿದಾಗ ಪರವ, ಪಂಬದ, ನಲಿಕೆ, ಮೇರ, ಮನ್ಸ ಸಮುದಾಯಗಳು ಈ ಪ್ರದೇಶದ ಮೂಲ ನಿವಾಸಿಗಳೆಂಬುದಾಗಿ ತರ್ಕಿಸಬಹುದು. 'ನಲಿಕೆ' ಎಂದರೆ ತುಳು ಭಾಷೆಯಲ್ಲಿ ಕುಣಿತ ಎಂದರ್ಥ. ನಲಿಪು ಎಂಬ ಧಾತು ಕುಣಿಯು ಎಂಬರ್ಥದಲ್ಲಿ ಈಗಲೂ ತುಳುವಿನಲ್ಲಿ ಬಳಕೆಯಲ್ಲಿದೆ. ಅರ್ಥಕೋಶದಲ್ಲಿ ನಲಿಕೆ ಎಂಬ ಪದಕ್ಕೆ ಈ ರೀತಿಯ ಅರ್ಥವಿದೆ. ನಲಿವು ಎಂಬುದು ದ್ರಾವಿಡ ಮೂಲದ ಧಾತು. ಕುಣಿಯು, ಸಂತೋಷಪಡಿಸು ಎಂಬ ಅರ್ಥದಲ್ಲಿ ಈ ಪದವು ಹೆಚ್ಚಿನ ದ್ರಾವಿಡ ಭಾಷೆಗಳಲ್ಲಿ ಬಳಕೆಯಲ್ಲಿದೆ. ನಲ್ಕು(ತಮಿಳು)–ಸಂತೋಷಪಡಿಸು, ನಲ್ಕು(ಮಲೆಯಾಳಂ) –ಅನುಗ್ರಹಿಸು, ನಲಿ(ಕನ್ನಡ) –ಕುಣಿಯು, ಆನಂದ ಪಡು, ನಲಿ(ಕೊಡವ)– ಸಂಗೀತದೊಂದಿಗೆ ಆಡು ಎಂಬರ್ಥದಲ್ಲಿ ಬಳಕೆಯಲ್ಲಿದೆ. ನಲಿಕೆ ಎಂಬುದು ಮೂಲತಃ ವೃತ್ತಿವಾಚಕ ಪದವಾಗಿದ್ದು ಈ ಜನಾಂಗದವರು ನಿರ್ವಹಿಸುವ ಕುಣಿತಗಳನ್ನು ವಿಶೇಷವಗಿ ಪ್ರತಿನಿಧಿಸುತ್ತದೆ, ಹಲವಾರು ಕುಣಿತಗಳ ಒಡೆತನವನ್ನು ಹೊಂದಿರುವ ಈ ಜನಾಂಗದವರನ್ನು ನಲಿಕೆಯವರು ಎಂಬ

ಜನಾಂಗ ವಾಚಿ ಹೆಸರಿನಿಂದ ಕರೆದಿರುವುದು ಔಚಿತ್ಯಪೂರ್ಣವಾಗಿದೆ. ತುಳುನಾಡಿನಲ್ಲಿ ಇವರು ನಲಿಕೆಯವರೆಂದೇ ಪ್ರಸಿದ್ಧರು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಅಂತಹ ಜನಪರ ಸೌಲಭ್ಯಗಳನ್ನು ಭರತ ಸರ್ಕಾರ ಹಿಂದುಳಿದ ವರ್ಗದವರಿಗೆ ಕೊಡ ಮಾಡಿದ ಸಂದರ್ಭದಲ್ಲಿ ಸರ್ಕಾರವು ನಲಿಕೆಯವರನ್ನು ಪರಿಶಿಷ್ಟ ಜಾತಿ ಎಂದು ಗುರುತಿಸಿದೆ. ಪರಿಶಿಷ್ಟ ಜಾತಿಗೆ ಸೇರಿದ ಇವರನ್ನು ಪುತ್ತೂರು, ಸುಳ್ಯ ತಾಲ್ಲೂಕುಗಳಲ್ಲಿ ಅಜಲ, ಅಜಲಾಯರೆಂದು, ಕಾರ್ಕಳ, ಬೆಳ್ತಂಗಡಿ, ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ನಲಿಕೆಯವರೆಂದು, ಕಾರ್ಕಳದ ಬಡಗುಭಾಗ, ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಪಾಣ, ಪಾಣಾರ, ಪಾನ್ರು ಎಂದು, ಬಂಟ್ವಾಳದ ವಿಟ್ಲ ಹೋಬಳಿ ಮತ್ತು ಕಾಸರಗೋಡು ತಾಲ್ಲೂಕುಗಳಲ್ಲಿ ಕೋಪಾಲರೆಂದು ಕರೆಯುತ್ತಾರೆ. ಕಾಸರಗೋಡು ತಾಲ್ಲೂಕು ಸೇರಿದಂತೆ ತುಳುನಾಡಿನ ಎಲ್ಲ ಭಾಗಗಳಲ್ಲಿ ಇವರು ಕಂಡು ಬರುತ್ತಾರೆ. ನಲಿಕೆಯವರ ಮಾತೃಭಾಷೆ ತುಳು. ಆದರೆ ಉಡುಪಿಯ ಉತ್ತರ ಭಾಗ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ವಾಸಿಸುವ ಪಾಣರು ಕನ್ನಡ ಮಾತನಾಡುತ್ತಾರೆ.

ಭೂತಾರಾಧನೆಯು ಒಂದು ವಿಶಿಷ್ಟವಾದ ಆಚರಣೆಯಾಗಿದೆ. ಭೂತಕೋಲವು ಕುಣಿತವೇ ಪ್ರಧಾನವಾದ ಒಂದು ಪ್ರದರ್ಶನ ಕಲೆ. ಕೋಲದಲ್ಲಿ ವೇಷ ಭೂಷಣ ತೊಟ್ಟು ನಲಿಕೆ ಸಮುದಾಯದ ಕಲಾವಿದ ಆಕರ್ಷಣೀಯವಾಗಿ ಕುಣಿಯುತ್ತಾನೆ. ಅಷ್ಟು ಮಾತ್ರವಲ್ಲದೇ ವರ್ಷದ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೀತಿಯ ವೇಷ-ಭೂಷಣ ಧರಿಸಿ ತೆಂಬರೆಯ ಹಿಮ್ಮೇಳದೊಂದಿಗೆ ಹಾಡು ಹೇಳಿಕೊಂಡು ಮನೆ ಮನೆಗೆ ಹೋಗಿ ಕುಣಿಯುವ ವೃತ್ತಿಯನ್ನು ಸಾಂಪ್ರದಾಯಿಕವಾಗಿ ಇವರು ನಡೆಸಿಕೊಂಡು ಬರುವವರು. ನಲಿಕೆಯವರಲ್ಲಿ ಒಟ್ಟು 21 ಕುಣಿತಗಳಿವೆ. ಅವುಗಳೆಂದರೆ, 1. ಆಟಿಕಳೆಂಜ 2. ಮಾಂಕಾಳಿ 3. ಸಾವುಕೋಲ 4. ಸೋಣದ ಜೋಗಿ 5. ಜೋಗಿ ಪುರುಷೆ 6. ಕಾವೇರಿ ಜೋಗಿ 7. ಪೊಲ್ಸೊಡಿ ಪೋಪಿನಿ 8. ಸೋಣೊದ ಮದಿಮ್ಮಲ್ 9. ಎರುಕೋಲ 10. ಕುದುರೆ ಕೋಲ 11. ಕೀಲು ಕುದುರೆ 12. ಕೊರಗ-ತನಿಯ 13. ಕೊರಗ ಕುಣಿತ 14. ಮಾದಿರ 15. ಕನ್ಯಾಪು 16. ಮಾಯಿದ ಪುರುಷೆರ್ 17. ಕಾಲೆ ಕೋಲ 18. ರಾಹು ಗುಳಿಗಕೋಲ 19. ಗದ್ದೆಗೋರಿ ಹೇಳಿಕೆ 20. ಕೆಡ್ಡಸದ ಹೇಳಿಕೆ ಕುಣಿತ ಮತ್ತು 21. ಮೂರ್ಲೆ ಕುಣಿತ. ತುಳುನಾಡಿನಲ್ಲಿ ಇವರು ನಡೆಸುವಷ್ಟು ವಿಧದ ಕುಣಿತಗಳನ್ನು ಬೇರೆ ಯಾವುದೇ ಜಾತಿಯವರು ನಡೆಸುವುದಿಲ್ಲ. ಇವುಗಳಲ್ಲದೇ ಕೃಷಿ ಸಂಬಂಧಿತ ಆಚರಣೆ, ನಾಗಾರಾಧನೆಗಳಲ್ಲಿಯೂ ಕೂಡ ಇವರು ತಮ್ಮ ಕುಣಿತಗಳ ಪ್ರದರ್ಶನದ ಮೂಲಕ ಪಾಲ್ಗೊಳ್ಳುತ್ತಾರೆ. ಮನೋರಂಜನೆಗಾಗಿಯೂ ಹಾಡನ್ನು ಸೃಜಿಸಿ, ಹಾಡಿಗೆ ತಕ್ಕಂತೆ ಕುಣಿತವನ್ನು ನಡೆಸಬಲ್ಲ ಪರಿಣತರು. ಆದುದರಿಂದ ಈ ಜಾತಿಯವರಿಗೆ ಅನ್ವರ್ಥವಾಗಿ ನಲಿಕೆಯವರು ಎಂಬ ಹೆಸರು ಬಂದಿದೆ.

## ಜೀವನಾವರ್ತನ ಆಚರಣೆಗಳು

ಜಗತ್ತಿನ ಬಹುತೇಕ ಎಲ್ಲಾ ಭೌಗೋಳಿಕ ಪ್ರದೇಶದ ಜಾತಿ ಜನಾಂಗಗಳಲ್ಲಿ ವ್ಯಕ್ತಿಯು ಹುಟ್ಟಿನಿಂದ ಮರಣ ಹೊಂದುವವರೆಗೆ ಬದುಕಿನ ಬೇರೆ ಬೇರೆ ಹಂತದಲ್ಲಿ ರೂಢಿಗತವಾಗಿ ಆಚರಿಸಲ್ಪಡುವ ವಿಧಿವಿಧಾನಗಳನ್ನು ಜೀವನಾವರ್ತನ ಆಚರಣೆಗಳು ಎಂದು ಕರೆಯುತ್ತಾರೆ. ವೈದಿಕ ಪದ್ಧತಿಯಲ್ಲಿ ಇದನ್ನು ಸಂಸ್ಕಾರ ಎನ್ನುತ್ತಾರೆ. ವೈದಿಕ ಪದ್ಧತಿಯಲ್ಲಿ ಹುಟ್ಟಿನಿಂದ ಸಾವಿನವರೆಗೆ ಗಭಾದಾನ, ಪುಂಸವನ ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ವೇದವ್ರತ ಚತುಷ್ಟೆಯ, ಗೋದಾನ, ಸಮಾವರ್ತನ, ವಿವಾಹ ಅಂತ್ಯೋಷ್ಟಿ ಎಂಬ 16 ಸಂಸ್ಕಾರಗಳನ್ನು ಹೆಸರಿಸಲಾಗಿದೆ. ಇವುಗಳನ್ನು ಷೋಡಶ ಸಂಸ್ಕಾರಗಳೆನ್ನುತ್ತಾರೆ. (ಕನ್ನಡ ರತ್ನಕೋಶ, 1977 ಪು.ಸಂ.306) ಇವಿಷ್ಟು ಸಂಸ್ಕಾರಗಳು ಇಲ್ಲದೆ ಹೋದರು ವೈದಿಕ ಪದ್ಧತಿಯ ಸೀಮಂತ, ನಾಮಕರಣ, ಅನ್ನಪ್ರಾಶನ, ಚೌಲ, ವಿವಾಹ, ಅಂತ್ಯೋಷ್ಟಿ ಮುಂತಾದ ಸಂಸ್ಕಾರಗಳು ವೈದಿಕೇತರ ಪದ್ಧತಿಯಲ್ಲಿಯೂ ನಡೆಸಲ್ಪಡುತ್ತವೆ. ವೈದಿಕ ಪದ್ಧತಿಯಲ್ಲಿ ನಡೆಯುವ ಪ್ರತಿಯೊಂದು ಆಚರಣೆಯೂ ಮಂತ್ರಗಳ ಮಾರ್ಗದರ್ಶನದ ಮೂಲಕ ನಡೆಯುವುದರಿಂದ ಎಲ್ಲ ಕಡೆಯೂ ಸಾಮಾನ್ಯವಾಗಿ ಏಕ ಪ್ರಕಾರವಾಗಿರುತ್ತವೆ. ವೈದಿಕೇತರ ಪದ್ಧತಿಯ ಆಚರಣೆಗಳಿಗೆ ಮಂತ್ರಗಳ ಮಾರ್ಗದರ್ಶನವಿರುವುದಿಲ್ಲ. ಇದು ಜಾನಪದೀಯ ಪದ್ಧತಿಯಲ್ಲಿ ನಡೆಯುತ್ತದೆ. ತುಳುನಾಡಿನ ಮುಲದ ಎಲ್ಲಾ ಬ್ರಾಹ್ಮಣೇತರ ಜಾತಿ ಜನಾಂಗದ ಜನರು ತಮ್ಮ ಜೀವನಾವರ್ತನ ಆಚರಣೆಗಳನ್ನು ವೈದಿಕೇತರ ಜಾನಪದೀಯ ಪದ್ಧತಿಯಲ್ಲಿ ನಡೆಸುತ್ತಾರೆ. ನಲಿಕೆಯವರ ಆಚರಣೆಗಳು ಕೂಡಾ ಇದಕ್ಕಿಂತ ಭಿನ್ನವಾಗಿಲ್ಲ. ಇವರ ಆಚರಣೆಯ ಪ್ರತಿಯೊಂದು ಭಾಗವೂ ನಿರ್ದಿಷ್ಟವಾದ ನುಡಿಗಟ್ಟುಗಳನ್ನು ಗುರಿಕಾರನು ಹೇಳುವ ಮೂಲಕ ನಡೆಯುತ್ತದೆ. ನಲಿಕೆಯವರು ತುಳುನಾಡಿನ ಸಾಂಸ್ಕೃತಿಕ ವಿಭಾಗದ ಕಾರ್ಯಕರ್ತರಾದುದರಿಂದ ಜೀವನಾವರ್ತನ ಆಚರಣೆಗಳನ್ನು ಬಹಳ ಶ್ರದ್ಧೆಯಿಂದ ಮತ್ತು ವಿಧಿವತ್ತಾಗಿ ನಡೆಸುತ್ತಾರೆ. ವಿವಾಹ ಆಚರಣೆಯಲ್ಲಿ ಹಾಡುಗಳನ್ನು ಬಳಸುತ್ತಾರೆ. ತುಳು ಜನಪದ ಸಾಹಿತ್ಯದ ಪ್ರಮುಖ ಪ್ರಕಾರವಾದ ಪಾಡ್ದನಗಳಲ್ಲಿ ಹೆಚ್ಚಿನವುಗಳನ್ನು ಸೃಜಿಸಿದವರು ನಲಿಕೆ ಸಮುದಾಯದವರು. ತಾವಯ ರಚಿಸಿದ ಪಾಡ್ದನಗಳಲ್ಲಿ ಇವರು ಸಂದರ್ಭಕ್ಕನುಸಾರವಾಗಿ ಜೀವನಾವರ್ತನ ಆವರಣೆಗಳ ವಿಧಿ-ವಿಧಾನಗಳನ್ನು ವಿವರಿಸಿದ್ದಾರೆ. ನಲಿಕೆ ಸಮುದಾಯದ ಜೀವನಾಚರ್ತನ ಆಚರಣೆಗಳನ್ನು ಈ ಕೆಳಗಿನಂತೆ ವಿವರಿಸಲಾದೆ.

### 1. ಬಯಕೆ

ಬಯಕೆ ಎಂದರೆ ವೈದಿಕ ಪದ್ಧತಿಯ 'ಸೀಮಂತೋನ್ನಯನ'ಕ್ಕೆ ಸಂವಾದಿಯಾಗಿರುವ ಒಂದು ಆಚರಣೆ. ಗರ್ಭಿಣೆ ಹೆಣ್ಣು ತಾನು ಬಯಸಿದ ಎಲ್ಲಾ ವಸ್ತುಗಳನ್ನು ಹೊಂದಿರಬೇಕು. ಇಲ್ಲದೆ ಹೋದರೆ ಹುಟ್ಟುವ ಮಗುವಿಗೆ ಅಂಗವಿಕಲತೆ ಉಂಟಾಗುತ್ತದೆ ಎಂಬುದು ಜನಪದರ ನಂಬಿಕೆ. ಅದಕ್ಕಾಗಿ ಗರ್ಭಿಣಿ ಹೆಂಡತಿ ತಿನ್ನಲು ಬಯಸಿದ ತಿಂಡಿಗಳನ್ನು ಉಡಲು-ತೊಡಲು ಬಯಸಿದ ವಸ್ತ್ರಾಲಂಕಾರ ಸಾಧನಗಳನ್ನು ಗಂಡನು ಬಹಳ ಕಷ್ಟ ಪಟ್ಟಾದರೂ ಒದಗಿಸಲು ಪ್ರಯತ್ನಿಸುತ್ತಾನೆ. ಈ ನಿಟ್ಟಿನಲ್ಲಿ ಗರ್ಭಿಣಿ ಹೆಣ್ಣಿನ ಬಯಕೆಯನ್ನು ಪೂರೈಸುವ ಆಚರಣೆಯೇ ಬಯಕೆ. ವಾಸ್ತವವಾಗಿ ಗರ್ಭಿಣಿ ಹೆಣ್ಣಿಗೆ ಹಸಿವು ಹೆಚ್ಚಾಗಿರುತ್ತದೆ. ತನ್ನ ಹೊಟ್ಟೆಯ ಹಸಿವನ್ನು ನೀಗಿಸುವುದರ ಜೊತೆಗೆ ಆಕೆ ಹೊಟ್ಟೆಯಲ್ಲಿರುವ ಮಗುವಿನ ಬೆಳವಣಿಗೆಗೆ ಬೇಕಾದ ಆಹಾರಾಂಶಗಳನ್ನು ಕೂಡ ಆ ತನ್ನ ದೇಹದ ಮುಲಕವೆ ಒದಗಿಸಬೇಕಾಗುತ್ತದೆ. ಹಸಿವು ಹೆಚ್ಚಾದಾಗ ಏನಾದರೂ ಸಿಕ್ಕಿದ್ದನ್ನೆಲ್ಲಾ ತಿನ್ನೋಣವೆಂದು ಅನಿಸುವುದು ಸಹಜ.

ಗರ್ಭಿಣಿಗೆ 7 ತಿಂಗಳಾಗುವಾಗ ಬಯಕೆ ನಡೆಸುವುದು ಪದ್ಧತಿ. ಆ ದಿನ ಆಕೆಗೆ ಹೊಸ ಸೀರೆ, ರವಿಕೆತೊಡಸಿ, ಹೂ-ಪಿಂಗಾರ ತಲೆಗೆ

ಮುಡಿಸಿ ಚಿನ್ನಾಭರಣ ತೊಡಸಿ ಶೃಂಗರಿಸುತ್ತಾರೆ. ಬಳಿಕ ಹೊದಲು, ಅವಲಕ್ಕಿ, ಬೆಲ್ಲ, ತೆಂಗಿನಕಾಯಿ ಕಲಸಿದ ಕಜ್ಜಾಯ, ಚಕ್ಕುಲಿ, ಬಾಳೆಹಣ್ಣು ಮತ್ತಿತರ ಸಿಹಿತಿಂಡಿಗಳನ್ನು ಬಡಿಸಿ ಉಣಿಸುತ್ತಾರೆ. ಊಟಕ್ಕೆ ಮೊದಲು ಆಕೆ (ಗರ್ಭಿಣಿ) ಒಂದು ಹೇಂಟೆಗೆ (ಕೋಳಿ) ಅಕ್ಕಿ ತಿನ್ನಿಸಿ, ನೀರು ಕುಡಿಸಿ ಬಿಡುತ್ತಾರೆ. ಈ ಕೋಳಿಯನ್ನು ಕೊಲ್ಲಬಾರದೆಂಬ ನಿಯಮವಿದೆ. ಅಕ್ಕಿ-ನೀರು ತಿನ್ನಿಸುವ ಆಚರಣೆ ಸಂತಾನಾಪೇಕ್ಷೆಯನ್ನು ಸಾಂಕೇತಿಸುತ್ತದೆ. ಗರ್ಭಿಣಿ ಹೆಣ್ಣು ಊಟಕ್ಕೆ ಕುಳಿತಾಗ ಆಕೆಯ ತಲೆಗೆ ಹೆಂಗಸರು ಗರಿಕೆಹುಲ್ಲಿನ ಚಿಗುರಿನಲ್ಲಿ ತೆಂಗಿನೆಣ್ಣೆ ಹಚ್ಚುತ್ತಾರೆ. ಬಂದ ನೆಂಟರು ಆಕೆಗೆ ಉಡುಗೊರೆ ನೀಡುತ್ತಾರೆ. ಬಯಕೆ ಗಂಡನ ಮನೆಯಲ್ಲಿ ನಡೆಯುತ್ತದೆ. ಪಾಡ್ದನದಲ್ಲಿ ಬಯಕೆಯ ಆಚರಣೆಯ ಕುರಿತು ವರ್ಣಿಸಲಾಗಿದೆ.(ಅಮೃತ ಸೋಮೇಶ್ವರ, 1984 ಪು.ಸಂ.61)

**ಹೆರಿಗೆ:** ಸೂಲಗಿತ್ತಿಯ ನೆರವಿನಿಂದ ಮನೆಯಲ್ಲಯೇ ಹೆರಿಗೆ ಮಾಡಿಸುತ್ತಾರೆ. ನಲಿಕೆಯವರಲ್ಲಿ ಪರಿಣಿತ ಸೂಲಗಿತ್ತಿಯವರಿರುತ್ತಾರೆ. ಹೆರಿಗೆಯಾದ ಬಳಿಕ ಮಗುವಿನ ಹೊಕ್ಕುಳ ಬಳ್ಳಿ ಕೊಯ್ದು ಅಡಿಕೆ ಹಾಳೆಯಲ್ಲಿ ಮಲಗಿಸುತ್ತಾರೆ. ಕಾಸರಕನ ಬೀಜ ಸುಟ್ಟು ಹೊನ್ನೆ ಎಣ್ಣೆಯಲ್ಲಿ ಅರೆದು ಗಾಯಕ್ಕೆ ಹಚ್ಚುತ್ತಾರೆ. ಮಾಸು [Pleaoenta] ವನ್ನು ಹೊಂಡ ತೋಡಿ ಹುಗಿಯುತ್ತಾರೆ. ಹುಗಿಯಲು ತೋಡಿದ ಹೊಂಡವನ್ನು 'ಆಮೆಗುಂಡಿ' ಎನ್ನುತ್ತಾರೆ. ಮಾಸುವನ್ನು ಗದ್ದೆಯಲ್ಲಿ ಹುಳುವುದಿಲ್ಲ. ಬಾಣಂತಿ ಮಗುವನ್ನು ಸ್ನಾನ ಮಾಡಿಸಿ ಬಾಣಂತಿಗೆ ಕಾಳಜೀರಿಗೆ ಕಷಾಯ ಕೊಡುತ್ತಾರೆ.

**2. ನಾಮಕರಣ**

ಹುಟ್ಟಿದ 16ನೇ ದಿನ ಸಂಜೆಗೆ ಮಗುವನ್ನು ತೊಟ್ಟಿಲಲ್ಲಿ ಹಕುವ ಕ್ರಮ ಮಾಡುತ್ತಾರೆ. ತೊಟ್ಟಿಲನ್ನು ಕಾಡಬಳ್ಳಿಯಿಂದ ನೆಯ್ದು ತಯಾರಿಸುತ್ತಾರೆ. ತೊಟ್ಟಿಲಿನ ಮೇಲ್ಭಾಗಕ್ಕೆ ಚೆನ್ನಾಗಿರುವ ಬಳ್ಳಿಯ ತುಂಡು ಕಟ್ಟುತ್ತಾರೆ. ತೊಟ್ಟಿಲಿಗೆ ಧೂಪದ ಹೊಗೆ ಬಿಟ್ಟು ಶುದ್ಧ ಮಾಡಿ ಅಜ್ಜಿಯಂದಿರು ಮಗುವನ್ನು ತೊಟ್ಟಿಲಿಗೆ ಮೂರು ಸುತ್ತು ತೆಗೆದು ಮಲಗಿಸುತ್ತರೆ. ನಂತರ ಹೆಂಗಸರು ಜೋಗುಳ ಹಾಡುತ್ತಾರೆ. ಸಿಹಿ ಅವಲಕ್ಕಿ ಮಾಡಿ ಹಂಚುತ್ತಾರೆ.

**ನಲ್ವತ್ತನೇ ಸ್ನಾನ:** ಹೆಣ್ಣು ಮಗುವಾದರೆ ಹುಟ್ಟಿ 39ನೇ ದಿವಸ, ಗಂಡು ಮಗುವಾದರೆ 41ನೇ ದಿವಸ ಬಾಣಂತಿಗೆ ವಿಶೇಷ ಸ್ನಾನ ಮಾಡಿಸುವುದು ಪದ್ಧತಿ. ಇದನ್ನು 'ನಲ್ವತ್ತನೇ ಸ್ನಾನ' ಎನ್ನುತ್ತಾರೆ. ಅ ದಿನ ಬಾಣಂತಿ ಸ್ನಾನ ಮಾಡಿ ಹೊಸ ಸೀರೆ, ರವಿಕೆ ತೊಟ್ಟು ತೆಂಗಿನ ಮರ, ಹಲಸಿನ ಮರ, ಬಾವಿ ಮುಟ್ಟಿ ನಮಸ್ಕಾರ ಮಾಡಿ ಒಳಗೆ ಬರುತ್ತಾರೆ. ಬಾಣಂತಿ ಸಾಕಣೆ ಮಾಡಿದವರಿಗೆ ಆ ದಿನ ಬಾಣಂತಿಯ ಪತಿ ಸೀರೆಯೊಂದನ್ನು ಉಡುಗೊರೆ ನೀಡುವ ಕ್ರಮವಿದೆ. ಆ ದಿನ ವಿಶೇಷ ಅಡುಗೆ ಮಾಡಲಾಗುತ್ತದೆ. ಹೆರಿಗೆ ಮತ್ತು ಹೆರಿಗೆಗೆ ಸಂಬಂಧ ಪಟ್ಟಂತೆ ತುಳುನಾಡಿನ ಜನಪದರು ನಡೆಸುವ ಆಚರಣೆಗಳನ್ನು ಪಾಡ್ದನಗಳಲ್ಲಿ ಉಲ್ಲೇಖಿಸಲಾಗಿದೆ.(ಅಮೃತ ಸೋಮೇಶ್ವರ, 1984 ಪು.ಸಂ.29)

**3. ಮಗುವಿಗೆ ಅನ್ನಕೊಡುವುದು**

ಮಗುವಿಗೆ ಪ್ರಥಮ ಬಾರಿ ಅನ್ನ ಕೊಡುವ ದಿನ ನಿಶ್ಚಯಿಸುತ್ತಾರೆ. ಅ ದಿನ ಊಟಕ್ಕೆ ಪಾಯಸ ಮಾಡುತ್ತಾರೆ. ಎಲ್ಲರೂ ಊಟಕ್ಕೆ ಕುಳಿತ ತಾಯಿ ಮಗುವನ್ನೆತ್ತಿಕೊಂಡು ಊಟಕ್ಕೆ ಕುಳಿತವರ ಬಳಿಗೆ ಬರುತ್ತಾಳೆ. ಎಲ್ಲರೂ ಒಂದೊಂದು ಅಗುಳು ಅನ್ನ ಮಗುವಿನ ಬಾಯಿಗೆ ಇಡುತ್ತಾರೆ. ಇಲ್ಲವೇ ಪಾಯಸ ನೆಕ್ಕಿಸುತ್ತಾರೆ.

**4. ಕಜಂಬು**

ಕಜಂಬು ಎಂದರೆ ಚೌಲ, ಮೊದಲ ಬಾರಿಗೆ ಗಂಡು ಮಗುವಿನ ಕೂದಲು ಕತ್ತರಿಸುವ ಆಚರಣೆ. ಈ ಆಚರಣೆಗೆ ದಿನ ನೋಡಿ ದೇವರಿಗೆ ಸ್ವಸ್ತಿಕ ಇಟ್ಟು ಕೈ ಮುಗಿಯುತ್ತಾರೆ. ಮಣೆಯಲ್ಲಿ ಕುಳ್ಳಿರಿಸಿ ಅದೇ ಜಾತಿಯವನೊಬ್ಬ ಕತ್ತರಿಯಿಂದ ಮಗುವಿನ ಉದ್ದ ಕೂದಲು ಕತ್ತರಿಸಿ ಕೆನ್ನೆಗೆ ಕ್ಷೌರದ ಕತ್ತಿ ತಾಗಿಸುತ್ತಾನೆ. ನಂತರ ಮಗುವಿನ ಸ್ನಾನ ಮಾಡಿಸಿ ಹೊಸ ಅಂಗಿ ಚಡ್ಡಿ ತೊಡಿಸುತ್ತಾರೆ. ಮಧ್ಯಾಹ್ನ ನೆಂಟರಿಗೆ ಒಂದೆರಡು ಬಗೆ ಪಲ್ಯ, ಸಾರು ಮಾಡಿ ಊಟ ಬಡಿಸುತ್ತಾರೆ.

**5. ಕಿವಿಚುಚ್ಚುವುದು**

ಕಿವಿಚುಚ್ಚಲು ಒಳ್ಳೆಯ ದಿನ ನೋಡತ್ತಾರೆ. ಅಕ್ಕಸಾಲಿಗರಲ್ಲಿ ಹೋಗಿ ಕಿವಿಗಿಡುವ ಹಿತ್ತಾಳೆಯ ಇಲ್ಲವೇ ಬೆಳ್ಳಿಯ ಕೊಡಂಗೆ (ಮುರ) ಮಾಡಿಸಿ ತರುತ್ತಾರೆ. ದೇವರಿಗೆ ಸ್ವಸ್ತಿಕ ಇಟ್ಟು ದೀಪ ಬೆಳಗಿಸಿ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಮಗುವನ್ನು ಸ್ನಾನ ಮಾಡಿಸಿ ತಂದು ಮಣೆಯಲ್ಲಿ ಕುಳ್ಳಿರಿಸುತ್ತಾರೆ. ತಂದೆ ಇಲ್ಲವೇ ಗುರಿಕಾರ ಚೂಪಾದ ಸೂಜಿಯಿಂದ ಮಗುವಿನ ಕಿವಿ ಹಾಳೆಯನ್ನು ತೂತು ಮಾಡಿ, ಮಾಡಿಸಿ ತಂದ ಕಿವಿಯ ಆಭರಣ ತೊಡಿಸುತ್ತಾರೆ.

**6. ಪ್ರಥಮ ಬಾರಿ ಋತುಮತಿಯಾದಾಗ ನಡೆಸುವ ಆಚರಣೆ (ಮದಿಮ್ಮಲೆ ಮದಿಮೆ)**

ಹೆಣ್ಣು ಮಕ್ಕಳು ಮೈ ನೆರೆದಾಗ ನಡೆಸುವ ಆಚರಣೆಗೆ ಮದಿಮ್ಮಲೆ ಮದಿಮೆ (ಮದುಮಗಳಾದ ಮದುವೆ) ಎನ್ನುತ್ತಾರೆ. ಹೆಚ್ಚು ಋತಿಮತಿಯಾದುದು ತಿಳಿದೊಡನೆ ಆಕೆಯನ್ನು ಮನೆಯಿಂದ ಹೊರಗಿನ ಕೊಟ್ಟಿಗೆಯಲ್ಲಿ ಕುಳ್ಳಿರುವಂತೆ ಹೇಳುತ್ತಾರೆ. ಬೇರೆ ಕಟ್ಟಡವೇ ಇಲ್ಲದಿದ್ದರೆ ಕದಿಕೆ (ಭತ್ತ ಶೇಖರಣೆಗಾಗಿ ಬಿದಿರಿನ ತದಿಕೆ ಸುತ್ತಿ ತಯಾರಿಸುವ ಕಣಜ) ಸುತ್ತಿ ಅದರೊಳಗೆ ಕುಳ್ಳಿರಿಸುತ್ತಾರೆ. ನಂತರ ಜಾತಿಯ ನಾಲ್ಕು ಜನ ಹೆಂಗಸರನ್ನು ಕರೆದು ಸುದ್ದಿ ಹೇಳುತ್ತಾರೆ. ನಾಲ್ಕು ತೆಂಗಿನಕಾಯಿಯ ನಾರೆಬ್ಬಿಸಿ ಒಂದಕ್ಕೊಂದು ಕಟ್ಟಿ ಅಂಗಳದಲ್ಲಿಡುತ್ತಾರೆ. ಅದರ ಮೇಲೆ ಹುಡುಗಿಯನ್ನು ಕುಳ್ಳಿರಿಸುತ್ತಾರೆ. ಬಂದ ಹೆಂಗಸರು ಅವಳ ತಲೆಗೆ ವೀಳ್ಯದೆಲೆ ತುದಿಯಲ್ಲಿ ಎಣ್ಣೆ ತೆಂಗಿನಹಾಲು ಹಾಕುತ್ತಾರೆ. ನಂತರ ಮಣ್ಣಿನ ಕಲಶ (ಬಿಂದಿಗೆ) ದಿಂದ ನೀರು ಹೊಯ್ಯುತ್ತಾರೆ. ಋತುಮತಿಯಾದ ಮೂರನೇ ದಿವಸ ಅಂಗಳದಲ್ಲಿ ಭತ್ತ ಹರಡಿ ಅದರ ಮೇಲೆ ಒನಕೆ ಇಟ್ಟು ಒನಕೆಯ ಮೇಲೆ ಆಕೆಯನ್ನು ಕುಳ್ಳಿರಿಸಿ ಐದು ಜನ ಹೆಂಗಸರು ಆಕೆಯ ತಲೆಗೆ ಎಣ್ಣೆ, ಕಾಯಿ ಹಾಲು ಬಿಟ್ಟು ಕಲಶದ ನೀರೆರೆಯುತ್ತಾರೆ. ಬಳಿಕ ಅವಳನ್ನು ಸ್ನಾನ ಮಾಡಿಸಿ ಹೊಸ ಸೀರೆ, ರವಿಕೆ ತೊಡಿಸಿ ಅಂಗಳದ ಬದಿಯಲ್ಲಿರುವ ತೆಂಗಿನ ಮರ, ಹಲಸಿನ ಮರ ಮುಟ್ಟಿಸಿ ನಮಸ್ಕಾರ ಮಾಡಿಸುತ್ತಾರೆ. ಮತ್ತೆ ಮನೆಯೊಳಗೆ ಕರೆದೊಯ್ದು ಅಡುಗೆ ಪಾತ್ರೆ ಸೌಟುಗಳಿಗೆನಮಸ್ಕಾರ ಮಾಡಿಸುತ್ತಾರೆ. ಇದನ್ನು ಕರಪತ್ತವುನೆ (ಮಡಿಕೆ ಹಿಡಿಸುವುದು) ಎನ್ನುತ್ತಾರೆ. ಬಳಿಕ ಅವಳನ್ನು ಮನೆಯೊಳಗೆ ಚಾಪೆಯಲ್ಲಿ ಕುಳ್ಳಿರಿಸಿ ಆರತಿ ಮಾಡುತ್ತಾರೆ. ಬಂದವರು ಉಡುಗೊರೆ ನೀಡುತ್ತಾರೆ. ಆ ಮೇಲೆ ಊಟ ನಡೆಯುತ್ತದೆ. ಊಟವಾದ ಬಳಿಕ ಆಕೆಯನ್ನು ಸೋದರ ಮಾವ ತನ್ನ ಮನೆಗೆ ಕರೆದುಕೊಂಡು ಹೊಗುತ್ತಾನೆ. ಅಲ್ಲಿ ನಾಲ್ಕು ದಿವಸ ಇದ್ದು ತನ್ನ ಮನೆಗೆ ಹಿಂತಿರುಗುತ್ತಾಳೆ. ಹೆಣ್ಣು

ಋತುಮತಿಯಾದಾಗ ನಡೆಸುವ ಆಚರಣೆಗಳನ್ನು 'ಮೈ ಸಂದಾಯ' ಪಾಡ್ದನದಲ್ಲಿ ವರ್ಣಿಸಲಾಗಿದೆ. (ಅಮೃತ ಸೋಮೇಶ್ವರ, 1984 ಪು.ಸಂ.60)

### 7. ಮದುವೆ

ಗಂಡಿನ ಕಡೆಯವರು ಹೆಣ್ಣು ನೋಡಲು ಮುಂದಾಗಿ ತಿಳಿಸಿ ಹೆಣ್ಣಿನ ಮನೆಗೆ ಹೋಗುತ್ತಾರೆ. ಹೆಣ್ಣು ಒಪ್ಪಿಗೆಯಾದರೆ ಹೆಣ್ಣಿನ ಕಡೆಯವರನ್ನು ತಮ್ಮಲ್ಲಿಗೆ ಬರಹೇಳುತ್ತಾರೆ. ಪರಸ್ಪರ ಒಪ್ಪಿಗೆಯಾದರೆ ಮದುವೆಯ ದಿನ ನಿಶ್ಚಯ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಒಂದೇ 'ಬಳಿ' ಯವರೊಳಗೆ ವಿವಾಹ ಸಂಬಂಧ ಆಗುವುದಿಲ್ಲ. ಇದನ್ನು 'ಕೂಡಬಳಿ' ಎನ್ನುತ್ತಾರೆ. ಹೆಣ್ಣಿನ ಮನೆಯಲ್ಲಿ ಮದುವೆಯ ನಿಶ್ಚಯ ಕಾರ್ಯ ನಡೆಯುತ್ತದೆ. ಇದನ್ನು 'ಬದ್ದ' ಎನ್ನುತ್ತಾರೆ. ಗಂಡಿನ ಕಡೆಯವರು ಆ ದಿನ ಹೋಗುವಾಗಜೊತೆಯಲ್ಲಿ ಹೂ, ಸೀರೆ, ವೀಳ್ಯೆದೆಲೆ, ಅಡಿಕೆ ಕೊಂಡೂಯ್ಯಬೇಕು. ನಿಶ್ಚಯಕ್ಕೆ ಮೊದಲು'ತೆರವಿನ ಹಣ' (ವಧೂದಕ್ಷಿಣೆ) ಎಷ್ಟೆಂಬುದರ ಬಗ್ಗೆ ನಿರ್ಧಾರಕ್ಕೆ ಬರುತ್ತಾರೆ. ಸಾಮಾನ್ಯವಾಗಿ 16 1/4ರಷ್ಟು ರೂಪಾಯಿ. ಶ್ರೀಮಂತಿಕೆ ಇದ್ದವರು ಹೆಚ್ಚು ಹಣ ಕೊಡುತ್ತಾರೆ. (ಆದರೆ ಪ್ರಸ್ತುತ ಈ ವಧೂದಕ್ಷಿಣೆ ನೀಡಲಾಗುವುದಿಲ್ಲ) ಈ ಹಣವನ್ನು ಗಂಡು ಹೆಣ್ಣಿನ ತಂದೆಗೆ ಕೊಡಬೇಕು. ತೆರವಿನ ಹಣ ನಿರ್ಧಾರವಾದ ಮೇಲೆ ಮದುವೆಯ ದಿನ ನಿಶ್ಚಯವಾಗುತ್ತದೆ. ಮದುವೆ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಗಂಡಿನ ದಿಬ್ಬಣ ಹೆಣ್ಣಿನ ಮನೆಗೆ ಬರುತ್ತದೆ. ದಿಬ್ಬಣ ಹೊರಡುವ ಹಿಂದಿನ ದಿನ ವರನ ಮನೆಯಲ್ಲಿ ಕನ್ಯಾಕಂಬ ನೆಟ್ಟು ಗುರು ಉಳ್ಳಾಲ್ತಿ ಆರಾಧನೆ ಮಾಡಲಾಗುತ್ತದೆ. ಹಾಗೇ ಅದೇ ದಿನ ವರ ಮತ್ತು ವಧುವಿನ ಅರಶಿನ ಶಾಸ್ತ್ರ ಮಾಡುವ ಕ್ರಮವಿದೆ. ಮದುವೆಯ ದಿನ ಹೆಣ್ಣಿನ ಮತ್ತು ಗಂಡಿನ ತಂದೆ ತಾಯಿ ಮದುಮಗ–ಮದುಮಗಳನ್ನು ಕನ್ಯಾಕಂಬಕ್ಕೆ ಮೂರು ಸುತ್ತು ಬರಸಿ ನಮಸ್ಕಾರ ಮಾಡಿಸಿ ಕನ್ಯಾಕಂಬದ ಎದುರು ನಿಲ್ಲಿಸಿ ಧಾರೆ ಎರೆಯುತ್ತಾರೆ.

ಹೆಣ್ಣಿನ ತಂದೆ ವಧೂವರರ ಕೈಗಳನ್ನು ಒಂದರ ಮೇಲೆ ಒಂದರಂತೆ ಇಟ್ಟು ಕಲಶದ ನೀರನ್ನು ಹೊಯ್ಯುತ್ತಾರೆ. ವಧುವಿನ ತಾಯಿ ಕೈಗಳ ಅಡಿಯಲ್ಲಿ ನೀರು ಕೆಳಗೆ ಬೀಳದಂತೆ ತಟ್ಟೆ ಹಿಡಿಯುತ್ತಾಳೆ. ಧಾರೆ ಎರೆದ ಮೇಲೆ ಗಂಡು ಹೆಣ್ಣಿನ ಕುತ್ತಿಗೆಗೆ ತಾಳಿ ಇರುವ ಕರಿಮಣಿ ಸರ ಕಟ್ಟುತ್ತಾನೆ. ವಧೂವರರು ಹೂ ಮಾಲೆ ಹಾಕಿಕೊಳ್ಳುತ್ತಾರೆ. ವಧೂವರರನ್ನು ಬೆಂಚಿನ ಮೇಲೆ ಕುಳ್ಳಿರಿಸಿ ಎಲ್ಲ ಸೇಸೆ ಹಾಕಿ ಉಡುಗೊರೆ ಮಾಡುತ್ತಾರೆ. (ವಧೂವರರ ತಲೆಯ ಮೇಲೆ ಅಕ್ಕಿ ಕಾಳು ಪ್ರೇಕ್ಷಣೆ ಮಾಡುವುದೇ ಸೇಸೆ) ನಂತರ ಹೆಂಗಸರು ವಧೂವರರಿಗೆ ಆರತಿ ಮಾಡುತ್ತಾರೆ. ಬಳಿಕ ಊಟ ನಡೆಯುತ್ತದೆ. ಮದುವೆಯ ಸಂದರ್ಭದಲ್ಲಿ ಮದುವೆ ಹಾಡುಗಳನ್ನು ಹೆಂಗಸರು ಹೇಳುವ ಕ್ರಮವಿದೆ. ಪಾಡ್ದನಗಳಲ್ಲಿ ಮದುವೆಯ ವರ್ಣನೆಯ ಬಗ್ಗೆ ಉಲ್ಲೇಖಿಸಲಾಗಿದೆ. (ಅಮೃತ ಸೋಮೇಶ್ವರ, 1984 ಪು.ಸಂ.63)

### 8. ಸಾವು (ಉತ್ತರ ಕ್ರಿಯೆ)

ನಲಿಕೆಯವರಲ್ಲಿ ವ್ಯಕ್ತಿ ಸಾಯುವ ಕಾಲದಲ್ಲಿ ಕೌಟುಂಬಿಕರು ಆತನ ಬಾಯಿಗೆ ನೀರು ಬಿಡುತ್ತಾರೆ. ಒನಕೆಯಿಂದ ಛಾವಣಿಯಲ್ಲೊಂದು ತೂತು ಮಾಡುತ್ತಾರೆ. ಹೆಣವನ್ನು ಚಾಪೆಯಲ್ಲಿ ಮಲಗಿಸಿ ಬಿಳಿಬಟ್ಟೆ ಮುಸುಕು ಹಾಕುತ್ತಾರೆ. ಹೆಣದ ತಲೆಯ ಪಕ್ಕದಲ್ಲಿ ಅಕ್ಕಿರಾಶಿ, ಕಾಲ ಪಕ್ಕದಲ್ಲಿ ಭತ್ತ ಸಣ್ಣ ರಾಶಿ ಹಾಕಿ ಅದರಲ್ಲಿ ಒಂದೊಂದು ಹೋಳು ತೆಂಗಿನ ಕಾಯಿಯಲ್ಲಿ ಎಣ್ಣೆ ಎರೆದು ಬತ್ತಿ ಉರಿಸಿ ಇಡುತ್ತಾರೆ. ನಂತರ ತೆಂಕು (ದಕ್ಷಿಣ ದಿಕ್ಕು) ಮುಖವಗಿ ಒಲೆ ಹಾಕಿ ಮಣ್ಣಿನ ಮಡಿಕೆಯಲ್ಲಿ ನೀರು ಬಿಸಿ ಮಾಡುತ್ತಾರೆ. ಮಡಿಕೆಗೆ ಮುಚ್ಚಳ ಇಡುವುದಿಲ್ಲ. ನೀರು ಸ್ವಲ್ಪ ಬಿಸಿಯಾದೊಡನೆ ಹೆಣವನ್ನು ಹಲಗೆಯಲ್ಲಿ ಮಲಗಿಸಿ ಶೀಗೆ, ಬಾಗೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ಸ್ನಾನ ಮುಗಿದ ಬಳಿಕ ನೀರು ಕಾಯಿಸಿದ ಪಾತ್ರೆಯನ್ನು ಕವುಚಿ ಹಾಕಲಾಗುತ್ತದೆ. ನಂತರ ಅಂಗಳದಲ್ಲಿ ಬಿದಿರಿನ ಚಟ್ಟದಲ್ಲಿ (ಸಿದಿಗೆ) ಬೂದಿ ಜಾತಿಯ ಬಾಳೆ ಎಲೆ ಹಾಸಿ ಹೆಣವನ್ನು ಮಲಗಿಸುತ್ತಾರೆ. ಹೆಣಕ್ಕೆ ಪಂಚೆ ಉಡಿಸಿ, ಮುಂಡಾಸು ಕಟ್ಟುತ್ತಾರೆ. ಶಾಲು ಹೊದಿಸುತ್ತಾರೆ. ಭೂತ ಕಲಾವಿದರು ಸತ್ತಾಗ ಮುಖಕ್ಕೆ ಅರಿದಾಳ ಹಚ್ಚುತ್ತಾರೆ. ಮತ್ತೊಮ್ಮೆ ಎಲ್ಲರೂ ಬಾಯಿಗೆ ನೀರು ಬಿಡುತ್ತಾರೆ. ಹಣೆಗೊಂದು ನಾಣ್ಯ ಇಡುತ್ತಾರೆ. ಅಡಿಕೆ, ವೀಳ್ಯ ಸುಣ್ಣವನ್ನು ದ್ವಾರಬಂಧದ ಕೆಳಮೆಟ್ಟಲಲ್ಲಿ ಜಜ್ಜಿ ಹೆಣದ ಬಾಯಿಗಿಡುತ್ತಾರೆ. ಕೈ ಮತ್ತು ಕಾಲುಗಳ ಹೆಬ್ಬೆರಳುಗಳನ್ನು ಬಟ್ಟೆಯ ದಾರದಿಂದ ಪರಸ್ಪರ ಜೋಡಿಸಿ ಕಟ್ಟುತ್ತಾರೆ. ಹೆಣಕ್ಕೆ ಬಿಳಿ ಬಟ್ಟೆಯ ಮುಸುಕು ಹಾಕಾತ್ತಾರೆ. ಹೆಣವನ್ನು ಚಿತೆಗೆ ಕೊಂಡೊಯ್ಯುವ ಸಿದ್ದತೆ ನಡೆಯುತ್ತದೆ. ಚಿತೆಗೆ ಸತ್ತ ವ್ಯಕ್ತಿಯ ಮಕ್ಕಳು ತಲೆ ಮತ್ತು ಕಾಲಿನ ಕಡೆಯಿಂದ ಬೆಂಕಿ ಕೊಡುತ್ತಾರೆ. ಸತ್ತವನು ದೈವದೇವರಿಗೆ ಹೇಳಿದ ಹರಕೆ ಇದ್ದರೆ, ಸತ್ತವನಿಗೆ ಯಾರದ್ದಾದರೂ ಶಾಪ ಇದ್ದರೆ ಚಿತೆಗೆ ಬೇಗನೆ ಬೆಂಕಿ ಹತ್ತಿಕೊಳ್ಳುವುದಿಲ್ಲವೆಂಬ ನಂಬಿಕೆ ಇದೆ. ಅದಕ್ಕಾಗಿ ಕೂಡಿದವರು ಬಾಕಿ ಇದ್ದ ಹರಕೆ ಸಂದಾಯ ಮಾಡುವುದಾಗಿಯೂ, ಶಾಪಕ್ಕೆ ಪರಿಹಾರ ಕ್ರಮ ಕೈಗೊಳ್ಳುವುದಾಗಿಯೂ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಆಗ ಚಿತೆಗೆ ಪೂರ್ಣ ಬೆಂಕಿ ಆವರಿಸುವುದನ್ನು 'ನಡುಕೂಡುವುದು' ಎನ್ನುತ್ತಾರೆ. ನಡುಕೂಡಿದ ಮೇಲೆ ಚಿತೆಗೆ ಮರಕಡಿದ ಕೊಡಲಿಯ ಹಿಡಿಗೆ ಶವವಸ್ತ್ರ ಸುತ್ತಿ ಎಡಗೈಯಿಂದ ತೆಗೆದು ಚಿತೆಯ ಮೇಲಿನಿಂದ ಚಿತೆಯ ಇನ್ನೊಂದು ಬದಿಗೆ ಎಸೆಯುತ್ತಾರೆ. ಆ ಮೇಲೆ ಎಲ್ಲರೂ ಮನೆಗೆ ಬರುತ್ತಾರೆ. ಸಾವು ಅಥವಾ ಉತ್ತರ ಕ್ರಿಯೆವು ಸತ್ತ 11, 12 ಅಥವಾ 13ನೇ ದಿವಸ ನಡೆಯುತ್ತದೆ. ಉತ್ತರ ಕ್ರಿಯೆ ಆಚರಣೆಯಲ್ಲಿ ಭಾಗವಹಿಸುವ ಸತ್ತವರ ಹತ್ತಿರದ ಸಂಬಂಧಿಗಳಾಗಿರುತ್ತಾರೆ.

### ಉಪಸಂಹಾರ

ಒಟ್ಟಾರೆಯಾಗಿ ತುಳುನಾಡಿನ ನಲಿಕೆ ಸಮುದಾಯದವರು ಹುಟ್ಟಿನಿಂದ ಮರಣದವರೆಗೆ ಆಚರಿಸುವ ಆಚರಣೆಗಳು ಬಹು ವಿಶಿಷ್ಟತೆಯಿಂದ ಕೂಡಿದ್ದು, ಇದು ಹಿರಿಯರಿಂದ ಕಿರಿಯರಿಗೆ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಯವರೆಗೆ ವರ್ಗಾವಣೆಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ಸಮಾಜದ ಪ್ರಭಾವಕ್ಕೆ ಒಳಗಾಗಿ ಹಾಗೂ ಮಾಧ್ಯಮಗಳ ಪ್ರಭಾವದಿಂದ ನಲಿಕೆಯವರ ಆಚರಣೆಗಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಅದಾಗಿಯೂ ಭೂತಾರಾಧನೆಯಲ್ಲಿ ಇವರ ಪ್ರಾತಿನಿಧ್ಯತೆಯನ್ನು ಇಂದಿಗೂ ಮುಂದುವರಿಸಿಕೊಂಡು ಬರುತ್ತಿದ್ದಾರೆ.

### ಪರಾಮರ್ಶಕ ಗ್ರಂಥಗಳು

1. ಅಮೃತ ಸೋಮೇಶ್ವರ, "ತುಳು ಬದುಕು", ಪ್ರಕೃತಿ ಪ್ರಕಾಶನ, ಕೋಟೆಕಾರು, 1984.
2. ಮಾಲಗತ್ತಿ ಅರವಿಂದ, "ಭೂತಾರಾಧನೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಿಂತನೆ", ಶೈಲ ಪ್ರಕಾಶನ, ಮುದ್ದೇಬಿಹಾಳ,1991.

3. ಮಾಲಗತ್ತಿ ಅರವಿಂದ, "ತಯಳುವರ ಆಟಿಕಳೆಂಜ ಅಂತರ್ದೃಷ್ಟಿಯ ಸಂಶೋಧನೆ", ಹೇಮಾಂಶು ಪ್ರಕಾಶನ, ಕಾಟಿಪಳ್ಳ, ಮಂಗಳೂರು, 1993.
4. ಪಿ. ಕಮಲಾಕ್ಷ, "ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ", ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,1994.
5. ಬಿ. ಎ. ವಿವೇಕ ರೈ, "ತುಳು ಜಾನಪದ ಸಾಹಿತ್ಯ", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,1985.
6. ಸುಶೀಲಾ. ಪಿ. ಉಪಾಧ್ಯಾಯ. " ದ. ಕ. ನಲಿಕೆಯವರು", ಜಾನಪದ ಸಾಹಿತ್ಯದರ್ಶನ ಭಾಗ-17, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1993.
7. ಚಿನ್ನಪ್ಪಗೌಡ. ಕೆ., "ಭೂತಾರಾಧನೆ-ಜಾನಪದೀಯ ಅಧ್ಯಯನ", ಮುದಿಪು ಪ್ರಕಾಶನ, ಮಂಗಳ ಗಂಗೋತ್ರಿ, 1990.